**ಅಸಲು ದಾವಾ ನಂ. 324/2017**

**ಡಿ ಡಬ್ಲ್ಯೂ:1**

**(ಸಾಕ್ಷಿಯನ್ನು ಈ ದಿನ ದಿನಾಂಕ.29.07.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಎಮ್ ಬಿ ಎ ವಕೀಲರಿಂದಃ**

ಪ್ರಸ್ತುತ ಪ್ರಕರಣದಲ್ಲಿ ನಾನು 1ನೇ ಪ್ರತಿವಾದಿಯಾಗಿರುತ್ತೇನೆ. ನನ್ನ ಮುಖ್ಯವಿಚಾರಣೆ ಬದಲಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿವೆ. ನಾನು ಅದನ್ನು ತಿಳಿಕೊಂಡು ಹೆಬ್ಬೆಟ್ಟಿನ ಗುರುತು/ಸಹಿ ಮಾಡಿರುತ್ತೇನೆ. ಈ ದಾವೆಗೆ ಸಂಬಂಧಿಸಿದ ಕೆಳಕಂಡ ದಾಖಲಾತಿಗಳು ಹಾಜರುಪಡಿಸುತ್ತಿದ್ದು ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕೆಂದು ವಿನಂತಿಸುತ್ತೇನೆ.

1. ಅಸಲು ದಾವಾ ನಂಬರ 286/12 ರಲ್ಲಿ ದಾಖಲಿಸಿದ ಕರ್ನಾಟಕ ಸಂಧ್ಯಾ ಕಾಲ ಪತ್ರಿಕೆಯ ಪ್ರಕಟಣಾ ಭಾಗವನ್ನು ಹಾಜರುಪಡಿಸಿದ್ದು ಅದನ್ನು ನಿಡಿ1 ಎಂದು ಗುರುತಿಸಲಾಯಿತು.
2. ಅಸಲು ದಾವಾ ನಂಬರ 286/12 ರ ಆದೇಶ ಪ್ರತಿಯ ದೃಡಿಕೃತ ಪ್ರತಿ ಹಾಜರುಪಡಿಸಿದ್ದು ಒಟ್ಟು 8 ಪುಟಗಳನ್ನು ನಿಡಿ.2 ಎಂದು ಗುರುತಿಸಲಾಯಿತು.
3. ಅಸಲು ದಾವಾ ನಂಬರ 286/12 ರ ವಾದ ಪತ್ರವನ್ನು ಹಾಜರುಪಡಿಸಿದ್ದು ಒಟ್ಟು 5 ಪುಟಗಳನ್ನು ನಿಡಿ.3 ಎಂದು ಗುರುತಿಸಲಾಯಿತು.
4. 2006-07, 2011-12 ರ ಆಸ್ತಿ ನಂಬರ 920 ಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತ ದಾಖಲಾತಿಯ ಹಾಜರುಪಡಿಸಿದ್ದು ಅವುಗಳನ್ನು ನಿಡಿ 4 ಮತ್ತು 5 ಎಂದು ಗುರುತಿಸಲಾಯಿತು.
5. ದಿನಾಂಕ 31-03-2007 ರ ಆಸ್ತಿ ತೆರಿಗೆ ಪಾವತಿ ರಶೀದಿಯ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ.6 ಎಂದು ಗುರುತಿಸಲಾಯಿತು.

6. ಮನೆ ನಂಬರ 920 ರ ಬಳಗಾನೂರ ಗ್ರಾಮ ಪಂಚಾಯತಿಯವರು ನೀಡಿದ ಚಕ್ ಬಂದಿಯ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ.7 ಎಂದು ಗುರುತಿಸಲಾಯಿತು.
7. ಅಸಲು ದಾವಾ ನಂಬರ 286/12 ರ ತೀರ್ಪಿನ ಪ್ರತಿ ಮತ್ತು ಡಿಕ್ರಿ ದಾಖಲಾತಿಯ ದೃಡಿಕೃತ ಪ್ರತಿ ಹಾಜರುಪಡಿಸಿದ್ದು ಒಟ್ಟು 9 ಪುಟಗಳನ್ನು ನಿಡಿ 8 ಎಂದು ಗುರುತಿಸಲಾಯಿತು.
8. ದಿನಾಂಕ 27-03-15 ರ ತೆರಿಗೆ ಪಾವತಿ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 9 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.